(5) ಮೊಳಕಾಲ್ಮೂರು ತಾಲ್ಲೂಕನ್ನು ಡಾರ್ಕ್ ಏರಿಯಾ ಎಂದು ಘೋಷಿಸಿರುವ ಬಗ್ಗೆ

ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).—ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾದ ಮೊಳಕಾಲ್ಮೂರು ತಾಲ್ಲೂಕು ಡಾರ್ಕ್ ಏರಿಯಾ ಅಂದರೆ ಕಪ್ಪು ಪ್ರದೇಶವೆಂದು ಹಿಂದಿನ ಜನತಾ ಸರ್ಕಾರ ಘೋಷಣೆ ಮಾಡಿರುತ್ತದೆ. ಆದರೆ ಕೆಲವು ಅನುಕೂಲಸ್ಥರು ಅಲ್ಲಲ್ಲಿ ಕೊಳವೆ ಬಾವಿಗಳನ್ನು ತೋಡಿಸಿರುತ್ತಾರೆ. ಅಲ್ಲಿ ನಾಲ್ಕು, ಮೂರುವರೆ ಇಂಚು ನೀರಿದೆ ಬಿದ್ದಿರುತ್ತದೆ. ಆಲ್ಲದೆ ನಾನೂ ಸಹ ನನ್ನ ಜಮೀನಿನಲ್ಲಿ ಕೊಳವೆ ಬಾವಿ ಹಾಕಿಸಿರುತ್ತೇನೆ. ಅಲ್ಲಿ ಮೂರು ಇಂಚು ನೀರು ಬಿದ್ದಿರುತ್ತೆ. ಹಿಂದಿನ ಸರ್ಕಾರ ಏತಕ್ಕೋಸ್ಕರ ಮಾಡಿರುತ್ತಾರೆಂಬುದು ನನಗೆ ಗೊತ್ತಾಗುವುದಿಲ್ಲ. ಸರ್ಕಾರಕ್ಕೆ ಜಿಯಾಜಿಲಿಸ್ಟ್ ಇಲಾಖೆಯವರು ತಪ್ಪು ಮಾಹಿತಿ ಕೊಟ್ಟಿರುತ್ತಾರೆಂಬುದು ನಾನು ಈ ಸಂಬಂಧದಲ್ಲಿ ಹೇಳಬೇಕಾಗುತ್ತದೆ. ಈ ವಿಷಯಂ ನಾನು ಕಳೆದ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಸಂಬಂಧಪಟ್ಟ ಸಚಿವರು ಆದಷ್ಟು ಬೇಗ ಈ ವಿಷಯವನ್ನು ಪರಿಶೀಲನೆ ಮಾಡಿ, ಡಾರ್ಕ್ ಏರಿಯಾ ಎಂಬುದನ್ನು ತೆಗೆಸಂತ್ತೇನೆಂದು ಹೇಳಿರುತ್ತಾರೆ. ಆದರೆ ಇದನ್ನು ಇದುವರೆಗೂ ತೆಗೆಸಿರುವುದಿಲ್ಲ. ಈಗಲಾದರೂ ನಾನು ಸಂಬಂಧಪಟ್ಟ ಮಾನ್ಯಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇದನ್ನು ಜಾಗ್ರತೆಯಾಗಿ ತೆಗೆಸಿದರೆ, ನನ್ನ ಕ್ಷೇತ್ರದ ಬಡ ಜನಗಳಿಗೆ ಪಿ.ಎಲ್.ಡಿ. ಬ್ಯಾಂಕ್ ಅಥವಾ ಇತರೆ ಬ್ಯಾಂಕ್‌ಗಳಲ್ಲಿ ಸಾಲ ಸಿಕ್ಕುತ್ತದೆ. ಇದರಿಂದ ಸಣ್ಣ ಸಣ್ಣ ನೀರಾವರಿ ಬಾವಿಗಳನ್ನು ತೆಗಿಸಿಕೊಂಡು, ಅವರ ಜೀವನ ಮಟ್ಟ ಸುಧಾರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ, ನಾನು ಪುನ: ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ, ಹಿಂದಿನ ಮಂತ್ರಿಗಳು ಕೊಟ್ಟಿರತಕ್ಕ ಮಾತು ನಡೆಸಿ ಕೊಟ್ಟಿಲ್ಲ, ಆದಕ್ಕೋಸ್ಕರ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಮೊಳಕಾಲ್ಮೂರು ತಾಲ್ಲೂಕಿನಲ್ಲಿ ನಡೆಸಿದ ಅಂತರ್ಜಲ ಅಧ್ಯಯನದಿಂದ ಈ ತಾಲ್ಲೂಕಿನ ವಾರ್ಷಿಕ ನಿವ್ವಳ ಅಂತರ್ಜಲ ಲಭ್ಯ ಪ್ರಮಾಣವು ೨೫೨೦ ಹೆಕ್ಟೇರ್ ಮೀಟರಿನಷ್ಟಿದೆ ಎಂದು ತಿಳಿದು ಬಂದಿದೆ. ರಾಷ್ಟ್ರೀಯ ಮಟ್ಟದ ಅಂತರ್ಜಲ ಅಂದಾಜಂ ಸಮಿತಿಯ ಶಿಫಾರಸ್ಸಿನಂತೆ ಲೆಕ್ಕಾಚಾರ ಮಾಡಿದಾಗ ೧–೧–೧೯೮೭ರಲ್ಲಿ ಬಳಕೆಯ ಪ್ರಮಾಣವು ೨೧೮೨ ಹೆಕ್ಟೇರ್ ಮೀಟರಿನಷ್ಟಿತ್ತು. (ಶೇಕಡ ೮೭) ವಾರ್ಷಿಕ ಬಳಕೆಯ ಲಭ್ಯ ಪ್ರಮಾಣದ ಶೇಕಡ ೨೫ಕ್ಕೂ ಹೆಚ್ಚಿರುವ ಪ್ರದೇಶಗಳನ್ನು ಕಪ್ಪು ಎಂದು ವರ್ಗೀಕರಿಸಲು ತೆಗೆದುಕೊಂಡ ನಿರ್ಣಯದಂತೆ ಮೊಳಕಾಲ್ಮೂರು ತಾಲ್ಲೂಕನ್ನು 'ಕಪ್ಪು ಪ್ರದೇಶ' ವೆಂದು ವರ್ಗೀಕರಿಸಲಾಗಿದೆ. ಇದೇ ರೀತಿ ಅಂತರ್ಜಲವನ್ನು ಅನಿರ್ಬಂಧಿತವಾಗಿ ಬಳಸಿದಲ್ಲಿ ನೀರಿನ ಮಟ್ಟವು ಅಪಾಯಕಾರಿ ಮಟ್ಟಕ್ಕೆ ಕಂಸಿದು ಕುಡಿಯುವ ನೀರಿಗೂ ಸಹ ತೀವ್ರ ಕೊರತೆಯುಂಟಾಗುವುದರ ಜೊತೆಗೆ ಸ್ವಾಭಾವಿಕ ಸಸ್ಯವರ್ಗವು ಕ್ರಮೇಣವಾಗಿ ನಶಿಸಿ ಹೋಗುವ ಸಾಧ್ಯತೆ ಇದೆ.

ಮೇಲೆ ಹೇಳಿದಂತೆ ಕಪ್ಪು ಪ್ರದೇಶವೆಂಬ ಘೋಷಣೆಯು ತಾಲ್ಲೂಕು ಮಟ್ಟದ ಅಂತರ್ಜಲ ಬಳಕೆಯ ಪ್ರಮಾಣದ ಮೇಲೆ ಅವಲಂಬಿಸಿರುತ್ತದೆ ಅಲ್ಲಲ್ಲಿ, ಸಣ್ಣ ಪುಟ್ಟ ಪ್ರದೇಶಗಳಲ್ಲಿ ಮಾನ್ಯ ಶಾಸಕರು ಹೇಳಿದಂತೆ ಅಂತರ್ಜಲ ಇರುವ ಸಾಧ್ಯತೆ ಉಂಟು. ಅಂತಹ ಸಾಧ್ಯತೆಗಳು ಸ್ಥಳೀಯ ಕಲ್ಲಿನಲ್ಲಿರುವ ಬಿರುಕುಗಳ ಸಾಂದ್ರತೆಯನ್ನು ಅವಲಂಬಿಸಿ, ಸಾಂದ್ರತೆ ಹೆಚ್ಚಿರುವ ಜಾಗಗಳಲ್ಲಿ ಅಂತರ್ಜಲ ವಿರುವುದುಂಟು. ಆದರೆ, ಅಂತಹ ಸಾಧ್ಯತೆಗಳು ಅತೀ ವಿರಳ.

೧೯೮೭ನೇ ಇಸವಿಯವರೆಗೆ ಮಾಡಿದ ಅಂತರ್ಜಲ ವಿಶ್ಲೇಷಣೆಯಂ ತಾಲ್ಲೂಕು ಮಟ್ಟದ ಸಮೀಕ್ಷೆಯಾಗಿದ್ದು ಈಗ ಮತ್ತೊಮ್ಮೆ ಕಿರು ಜಲಾನಯನದ ಆಧಾರದ ಮೇಲೆ ಶೇಕಡ ೧೦೦ರಷ್ಟು ಮಾಹಿತಿಯನ್ನು ಸಂಗ್ರಹಿಸಿದ್ದೇವೆ. ಈ ಮಾಹಿತಿಯನ್ನು ಪುನ: ಪರಿಷ್ಕರಿಸಿ ರಾಷ್ಟ್ರೀಯ ಮಟ್ಟದ ಅಂತರ್ಜಲ ಅಂದಾಜು ಸಮಿತಿಗೆ ಒಪ್ಪಿಸಿ ಅದರ ಅನುಮತಿಯೊಡನೆ ಫಲಿತಾಂಶವನ್ನು ಪ್ರಕಟಿಸುತ್ತೇವೆ. ಈ ಪರಿಷ್ಕರಣೆಯ ಫಲಿತಾಂಶವು ಆಶಾದಾಯಕವಾಗಿರುತ್ತದೆ ಎಂದು ಭಾವಿಸುತ್ತೇವೆ.

ಅಧ್ಯಕ್ಷರು.—ಈಗ ಸಮಾಜ ಕಲ್ಯಾಣ ಸಚಿವರು ತಮ್ಮ ಪ್ರಸ್ತಾವನೆಯನ್ನು ಮಂಡಿಸುವುದು.

೧೯೯೦ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ—ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸುವ ಪ್ರಸ್ತಾವ.

ಶ್ರೀ ಬಿ ಶಿವಣ್ಣ (ಕಾನೂನು ಹಾಗೂ ಸಮಾಜ ಕಲ್ಯಾಣ ಸಚಿವರು)—ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಿ ಅಂಗೀಕರಿಸಲು ಸಭೆಗೆ ಒಪ್ಪಿಸಿದಾಗ ಹಲವು ಸದಸ್ಯರು ಮಾತನಾಡಿ ಈ ವಿಷಯದ

ಮಹತ್ವದ್ದಾಗಿರುವುದರಿಂದ ಇದು ಸಂಯುಕ್ತ ಪರಿಶೀಲನಾ ಸಮಿತಿಯ ಮುಂದೆ ಬರುವುದು ಅಗತ್ಯ ಎಂದು ಸೂಚಿಸಿದ್ದಾರೆ. ಆದುದರಿಂದ ಈ ವಿಧೇಯಕವನ್ನು ಸಂಯುಕ್ತ ಪರಿಶೀಲನಾ ಸಮಿತಿ ಒಪ್ಪಿಸಬೇಕೆಂದು ಹಾಗೂ ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆ ಪಡೆಯಬೇಕೆಂದು ಮತ್ತು ಈ ಕೆಳಕಂಡ ವಿಧಾನಸಭೆಯ ಸದಸ್ಯರು ಈ ಸಮಿತಿಗೆ ಸದಸ್ಯರಾಗಿರುತ್ತಾರೆಂಬ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

೧. ಶ್ರೀಮತಿ ಚಂದ್ರಪ್ರಭಾ ಅರಸ್
೨. ಶ್ರೀ ಮಲ್ಲಾರಿಗೌಡ ಪಾಟೀಲ್
೩. ಶ್ರೀ ಎಸ್. ಎಂ. ಯಾಹ್ಯಾ
೪. ಶ್ರೀಮತಿ ಮೋಟಮ್ಮ
೫. ಶ್ರೀ ಪ್ರತಾಪಚಂದ್ರ ಶೆಟ್ಟಿ
೬. ಶ್ರೀ ಶ್ರೀ ರಂಗದೇವರಾಯಲು
೭. ಶ್ರೀ ಎಲ್. ಆರ್. ಶಿವರಾಮೇಗೌಡ
೮. ಶ್ರೀ ಆರ್. ವಿ. ದೇಶಪಾಂಡೆ
೯. ಶ್ರೀ ಬಿ. ಎಸ್. ಯಡಿಯೂರಪ್ಪ
೧೦. ಶ್ರೀ ಎಂ. ಎಸ್. ಪಾಟೀಲ್
೧೧. ಶ್ರೀ ಕಾಗೋಡು ತಿಮ್ಮಪ್ಪ
೧೨. ಶ್ರೀ ಸಿ. ಬೈರೇಗೌಡ

ಅಧ್ಯಕ್ಷರು.—ಈಗ ಪ್ರಸ್ತಾವ ಏನೆಂದರೆ,

"೧೯೯೦ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಈ ಕೆಳಗೆ ನಮೂದಿಸಿದ ವಿಧಾನಸಭಾ ಸದಸ್ಯರನ್ನೊಳಗೊಂಡ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂಬ ಪ್ರಸ್ತಾವವನ್ನು ಅಂಗೀಕರಿಸುವುದು.

ಸದಸ್ಯರುಗಳ ಹೆಸರುಗಳು.

೧. ಶ್ರೀಮತಿ ಚಂದ್ರಪ್ರಭಾ ಅರಸ್
೨. ಶ್ರೀ ಮಲ್ಲಾರಿಗೌಡ ಪಾಟೀಲ್
೩. ಶ್ರೀ ಎಸ್. ಎಂ. ಯಾಹ್ಯಾ
೪. ಶ್ರೀಮತಿ ಮೋಟಮ್ಮ
೫. ಶ್ರೀ ಪ್ರತಾಪಚಂದ್ರ ಶೆಟ್ಟಿ
೬. ಶ್ರೀ ಶ್ರೀರಂಗದೇವರಾಯಲು
೭. ಶ್ರೀ ಎಲ್. ಆರ್. ಶಿವರಾಮೇಗೌಡ
೮. ಶ್ರೀ ಆರ್. ವಿ. ದೇಶಪಾಂಡೆ
೯. ಶ್ರೀ ಬಿ. ಎಸ್. ಯಡಿಯೂರಪ್ಪ
೧೦. ಶ್ರೀ ಎಂ ಎಸ್. ಪಾಟೀಲ್
೧೧. ಶ್ರೀ ಕಾಗೋಡು ತಿಮ್ಮಪ್ಪ
೧೨. ಶ್ರೀ ಸಿ. ಬೈರೆಗೌಡ

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಮಸೂದೆಯನ್ನು ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಲಾಯಿತು. ಹಾಗೂ ಈ ಸಮಿತಿಯು ಮಾರ್ಚ್ ೩೧ ೧೯೯೧ರ ಒಳಗೆ ವರದಿಯನ್ನು ಸಭೆಗೆ ಸಲ್ಲಿಸಬೇಕು.